ಊರಲ್ಲೊಂದೆಕರೆ ಜಮೀನು ಕೊಂಡು, ಈ ಗುಲಾಮಗಿರಿಯ ಬದುಕಿನ ಎದೆಯ ಮೇಲೆ ಕಾಲಿಟ್ಟು ದಾಟಿಹೋಗಬೇಕೆಂದುಕೊಳ್ಳುತ್ತಾ ಮತ್ತದೇ ಬಿಲ್ಲು, ಪೇಮೆಂಟುಗಳೊಳಗೆ ಮುಳುಗಿಹೋದ.

★★★

''ನೀವ್ಯಾಕೆ ಸುಮ್ಮನೆ ಬೈಸಿಕೊಂಡಿರಿ? ಐಟಿ ಆಫೀಸಲ್ಲಿ ಎಷ್ಟೊಂದು ಓಡಾಟವಿತ್ತೂಂತ ಹೇಳೋದು ತಾನೇ?''

ಮೇಲ್ಮಹಡಿಯ ಕ್ಯಾಂಟೀನಿನ ಟೇಬಲ್‌ನಲ್ಲಿ ಎದುರು ಕುಳಿತು ಕಾಫಿಯ ಸಿಪ್ಪಿಗೆ ತುಟಿ ಕೊಡುತ್ತಾ ಹೇಳಿದಳು ಮಂಗಳಾ.

''ಹೇಳುವುದಕ್ಕೆ ಅವರಿಗೂ ಅದು ಗೊತ್ತುರೀ. ಆದರೂ ಸುಮ್ಮನೆ ಬೈತಾರೆ. ಅವರಿಗೆ ಕೆಲಸ ಆಗಬೇಕಷ್ಟೇ.''

ಟೆರಸಿನಾಚೆ ವಿಸ್ತಾರದಲ್ಲಿ ಹರಡಿ ನಿಂತಿದ್ದ ಬಿಲ್ಡಿಂಗುಗಳ ರಾಶಿಯನ್ನೇ ದಿಟ್ಟಿಸುತ್ತಾ ಹೇಳಿದ ರಾಜೀವ.

''ನಿಮ್ಮ ಸೀನಿಯರ್ ಕೂಡಾ ಹಾಗೇ ಮಾಡಿದರು. ಅವರಿಗೂ ಈ ಶರ್ಮಾನಿಗೂ ಹುರಿದಕ್ಕಿ ಬೇಯುತ್ತಿರಲಿಲ್ಲ. ಅದಕ್ಕೇ ತಾನು ಬಿಟ್ಟುಹೋದ ಮೇಲೆ ಕಂಪನಿಗೆ ತನ್ನ ಬೆಲೆ ತಿಳಿಯಬೇಕೆಂಬ ಹಟದಲ್ಲಿ ನಿಮಗೆ ಸರಿಯಾಗಿ ನಾಲೆಡ್ಜ್ ಟ್ರಾನ್ಸ್‌ಫರ್ ಮಾಡಲಿಲ್ಲ. ಅಲ್ಲದೆ ಈ ಶರ್ಮಾನಿಗಾದರೂ ನಿಮ್ಮ ಮೇಲೆ ಅದೇನೋ ಒಂದು ವಿಶೇಷವಾದ ದ್ವೇಷ. ಬೇರೆ ಯಾರ ಕೆಲಸದಲ್ಲೂ ಕಾಣದ ಐಬುಗಳನ್ನ ನಿಮ್ಮ ಕೆಲಸದಲ್ಲಿ ಹುಡುಕುತ್ತಾನೆ... ಹೋಗಲಿ ಬಿಡಿ. ಮುಂದಿನ ಸಲ ಏನಾದ್ರೂ ಅರ್ಜೆಂಟ್ ಪೇಮೆಂಟಿದ್ರೆ ಇನ್ವಾಯ್ಸ್ ನನಗೆ ಕೊಟ್ಟು ಹೋಗಿ ಸರೀನಾ. ನೀವು ಹೀಗೆ ವಿನಾಕಾರಣ ಬೈಸಿಕೊಳ್ಳುವುದು ನನಗೆ ಇಷ್ಟವಾಗೊಲ್ಲ.''

ಹಾಗೆಂದವಳ ಮುಖವನ್ನೇ ಅಚ್ಚರಿಯಿಂದೆಂಬಂತೆ ದಿಟ್ಟಿಸಿದ ರಾಜೀವ. ಅವಳ ಕಾಡಿಗೆ ಬೆರೆತ ಕಣ್ಣುಗಳೂ ಅವನನ್ನೇ ನೋಡುತ್ತಿದ್ದವು. ವಿವರಿಸಲಾಗದ ನವಿರುತನವೊಂದನ್ನು ಸೂಸುತ್ತಿರುವ ಆ ನೋಟಕ್ಕೆ ವಿಚಲಿತನಾಗಿ ದೃಷ್ಟಿಯನ್ನು ಆಚೀಚೆ ಹರಿಸಿದ. ತುಟಿಯಂಚಿನ ಲಿಪ್‌ಸ್ಟಿಕ್‌ಗೆ ಅಂಟಿಕೊಂಡ ಮುಗುಳ್ನಗುವಿನೊಂದಿಗೆ ಅವಳು ಟೀ ಲೋಟಗಳನ್ನು ಎತ್ತಿಟ್ಟು ಬಸ್‌ಸ್ಟ್ಯಾಂಡಿನತ್ತ ನಡೆಯತೊಡಗಿದಳು. ಎದೆಯಲ್ಲಿ ಈಗಷ್ಟೇ ಮೂಡಿರುವ ನವಿರಾದ ಅಚ್ಚರಿಯ ಸಮೇತ ಅವನು ಅವಳನ್ನು ಹಿಂಬಾಲಿಸತೊಡಗಿದ.

''ಮತ್ತೆ... ನಿಮ್ಮ ಮದುವೆ ಯಾವಾಗ?''

ಮನದಲ್ಲಿ ಅರಳುತ್ತಿರುವ ಬಿಡಿ ಹೂಗಳಿಗೆ ದಾರ ಪೋಣಿಸುವಂತಹಾ ಪ್ರಶ್ನೆಯನ್ನು ಕೇಳಿದವಳ ಮುಖವನ್ನೇ ನೋಡುತ್ತಾ ರಾಜೀವ ಉತ್ತರಿಸಿದ.

''ಮದುವೆಯನ್ನೋ ಜಹಜನ್ನು ಹೇಗೆ ನಾನಿರೋ ದಡಕ್ಕೆ ಬಿಟ್ಟುಕೊಳ್ಳುವುದೋ ಗೊತ್ತಾಗುತ್ತಿಲ್ಲ ಮಂಗಳಾ. ಊರಲ್ಲಿ ಒಂದಷ್ಟು ಕೈಸಾಲಗಳಿವೆ. ಅವನ್ನ ತೀರಿಸಬೇಕು. ಮನೆ ರಿಪೇರಿ ಮಾಡಿಸಬೇಕು. ನಂತರ ಒಂದೆಕರೆ ನೀರಾವರಿ ಜಮೀನು ಕೊಳ್ಳಬೇಕು. ಜೊತೆಗೆ ನೋಟಿಸು ಕೊಡದೇ ಬರುವ ಸಾಂದರ್ಭಿಕ ಖರ್ಚುಗಳು ಬೇರೆ. ಗುಮಾಸ್ತಗಿರಿಯೆಂಬ ತೂತು ಮಡಿಕೆಯಲ್ಲಿ ಇಂತಹಾ ಆಸೆಗಳನ್ನು ತುಂಬಿಟ್ಟುಕೊಂಡು ಕಾಯುತ್ತಿರುವ ನಮ್ಮನ್ನೆಲ್ಲಾ ಯಾರು ತಾನೇ ಒಪ್ತಾರೆ ಹೇಳಿ?''

''ಅಲ್ಲೇ... ಅಲ್ಲೇ ನೀವು ತಪ್ಪುತಿಳಿದಿರುವುದು. ನೀವಂದುಕೊಂಡಂತೆ ಎಲ್ಲಾ ಹುಡುಗಿಯರೂ ಹಣದ ಹಿಂದೆ ಬೀಳುವವರಲ್ಲ ರಾಜೀವ್. ಹಳ್ಳಿ, ಜಮೀನು, ಸರಳ ಜೀವನವನ್ನು ಇಷ್ಟಪಡುವವರೂ ಇದ್ದಾರೆ. ಈಗ ನನ್ನನ್ನೇ ನೋಡಿ? ನನಗೆ ಲಕ್ಷಗಳ ಕಾರನ್ನು ಮನೆ ಮುಂದೆ ತಂದು ನಿಲ್ಲಿಸುವವ ಬೇಕಿಲ್ಲ. ಸರ್ಕಾರಿ ಬಸ್ಸಿಗೇ ಆದರೂ ಪ್ರೀತಿಯಿಂದ ಕೈಹಿಡಿದು ಹತ್ತಿಸುವವನಾದರೆ ಸಾಕು. ನಮ್ಮನ್ನು